ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1638
ಸದಸ್ಯರ ಹೆಸರು : ಶ್ರೀ ಆರ್. ಧರ್ಮಸೇನ
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 20-03-2020

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರದಿಂದ ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೂ ಸಾರಿಗೆ ಸಂಸ್ಥೆಯ ಬಸ್ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ; ಬಸ್ ಸೌಲಭ್ಯ ಇಲ್ಲದಿರುವ ಸ್ಥಳಗಳು ಇವೆಯೇ; ಈ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆಯೇ;	ಮೈಸೂರು ಜಿಲ್ಲೆಯಲ್ಲಿ ಒಟ್ಟು 1225 ಗ್ರಾಮಗಳಿದ್ದು, ಈ ಪೈಕಿ ಕ.ರಾ.ರ.ಸಾ.ನಿಗಮದ ವತಿಯಿಂದ 1211 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ 14 ಗ್ರಾಮಗಳ (ಪಿರಿಯಾಪಟ್ಟಣ ತಾಲ್ಲೂಕಿನ-1, ಹೆಚ್.ಡಿ.ಕೋಟೆ ತಾಲ್ಲೂಕಿನ-1, ತಿ.ನರಸೀಪುರ ತಾಲ್ಲೂಕಿನ-12) ಪೈಕಿ ಕೆಲವು ಗ್ರಾಮಗಳು ಕಡಿಮೆ ಜನಸಂಖ್ಯೆ ಹೊಂದಿರುವ ಕಂದಾಯ ಗ್ರಾಮಗಳಾಗಿರುತ್ತವೆ ಹಾಗೂ ಉಳಿದ ಕೆಲವು ಗ್ರಾಮಗಳಿಗೆ ಭಾರಿ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳು ಇಲ್ಲದಿರುವ ಕಾರಣ ಸಾರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 582 ಗ್ರಾಮಗಳಿದ್ದು, ಈ ಪೈಕಿ ಕ.ರಾ.ರ.ಸಾ.ನಿಗಮದ ವತಿಯಿಂದ 564 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಉಳಿದ 18 ಗ್ರಾಮಗಳ (ಚಾಮರಾಜನಗರ ತಾಲ್ಲೂಕಿನ-13, ಕೊಳ್ಳೇಗಾಲ ತಾಲ್ಲೂಕಿನ-5) ಪೈಕಿ ಕೆಲವು ಗ್ರಾಮಗಳು ಕಂದಾಯ ಗ್ರಾಮಗಳಾಗಿದ್ದು, ಕಡಿಮೆ ಜನಸಂಖ್ಯೆ ಹೊಂದಿರುವ/ಜನವಸತಿ ಇಲ್ಲದಿರುವ ಗ್ರಾಮಗಳಾಗಿರುತ್ತವೆ ಹಾಗೂ ಉಳಿದ ಕೆಲವು ಗ್ರಾಮಗಳಿಗೆ ಭಾರಿ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳು ಇಲ್ಲದಿರುವ ಕಾರಣ ಸಾರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.
ಆ	ಬಸ್ ಸೌಲಭ್ಯ ಇಲ್ಲದಿರುವ ಊರುಗಳಿಗೆ ಬಸ್ ಸೌಲಭ್ಯವನ್ನು ಎಷ್ಟು ದಿವಸಗಳಲ್ಲಿ ಕಲ್ಪಿಸಲಾಗುವುದು;	
ಇ	ಸಾರ್ವಜನಿಕರಿಂದ ಈ ಬಗ್ಗೆ ಈವರೆವಿಗೂ ಸ್ವೀಕರಿಸಲಾದ ಮನವಿಗಳು ಎಷ್ಟು?	2019ರಿಂದ ಈವರೆವಿಗೆ 65 ಮನವಿಗಳನ್ನು ಸ್ವೀಕರಿಸಲಾಗಿರುತ್ತದೆ. ಈ ಪೈಕಿ 42 ಮನವಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ 23 ಮನವಿಗಳಿಗೆ ಪ್ರಸ್ತುತ ಸಾರಿಗೆಗಳು ಕಾರ್ಯಾಚರಣೆಯಲ್ಲಿದ್ದು, ಹೆಚ್ಚುವರಿ ಸುತ್ತುವಳಿ/ವಿಸ್ತರಣೆಗೆ ಸಂಬಂಧಿಸಿದವುಗಳಾಗಿದ್ದು, ಈಗಾಗಲೇ ಅವಶ್ಯ ಸಾರಿಗೆ ಸೌಲಭ್ಯ ಲಭ್ಯವಿರುವುದರಿಂದ ಅವುಗಳನ್ನು ಪರಿಗಣಿಸಲಾಗಿರುವುದಿಲ್ಲ.

ಸಂಖ್ಯೆ: ಟಿಡಿ 129 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು